ಕವಿತೆ




## ಸತ್ಯಮಂಗಲ ಮಹಾದೇವ

ಕಲೆ: ಎಸ್.ವಿ. ಹೂಗಾರ್


# ಗಾಂಧೀ

ಹಸಿದವನ ಅನ್ನದಲ್ಲಿ
ಬೆವರು ಬಸಿವವನ ಹೃದಯದಲ್ಲಿ
ನೊಂದವರ ನುಡಿಯಲ್ಲಿ
ಕಣ್ಣೀರ ಒರೆಸಿದವನ ಹಸ್ತದಲ್ಲಿ
ಗಾಂಧೀ ಮರುಹುಟ್ಟು ಪಡೆಯುತ್ತಾನೆ.

ಟಿವಿರೇಡಿಯೋ, ಮೊಬೈಲ್ ಮೊಗಸಾಲೆಗಳಲ್ಲಿ
ದೊಡ್ಡ ಪರದೆಗಳ ಮುಂಭಾಗದ ಸೀಟುಗಳಲ್ಲಿ
ಪುರಕಾರ್ಮಿಕನು ಸ್ವಾತಂತ್ರ್ಯದ ದಿವಸ ಹಚ್ಚಿದ
ಊದುಬತ್ತಿಯ ಘಮಲಿನಲ್ಲಿ
ಅಲೆಮಾರಿ ತಾಯೊಬ್ಬಳ ಎದೆಹಾಲಿನಲ್ಲಿ
ಗಾಂಧೀ ಸತ್ಯವಾಗಿ ಅನುವಾದಗೊಳ್ಳುತ್ತಾನೆ.

ಅಪಹಾಸ್ಯಗಳ ಕೂಗುಗಳಲ್ಲಿ
ಕುತ್ಸಿತ ಟೀಕೆಗಳಲ್ಲಿ
ಗೋಡ್ಸೆಯ ಬಂದೂಕಿನ ನಳಿಕೆಗಳಲ್ಲಿ
ನಿರಾಕರಿಸಲು ಸೃಷ್ಟಿಸಿದ ಮಹಾತ್ಮ ಎಂಬ ಪದದಲ್ಲಿ
ಜಾಗತೀಕರಣದ ಕಣ್ಣು ಮನಸ್ಸುಗಳಲ್ಲಿ
ಗಾಂಧೀ ಸತ್ಯಾಗ್ರಹಕ್ಕಾಗಿ ಉಪವಾಸ ಕುಳಿತಿದ್ದಾನೆ.

ರಾಜ್ಯ, ರಾಷ್ಟ್ರ, ವಿಶ್ವದ ಯಾವುದೇ ಖುರ್ಚಿಗಳಲ್ಲಿ
ಸತ್ಯವನ್ನೇ ಬರೆಯುವ ನ್ಯಾಯಾಧೀಶರ ಪೆನ್ನಿನಲ್ಲಿ
ಕಾನೂನುಗಳ ಕಟ್ಟಳೆಗಳಲ್ಲಿ ವಕೀಲರ ಕಪ್ಪು ಕೋಟಿನಲ್ಲಿ
ರಕ್ಷಣೆಗೆ ಸಿದ್ಧವಾಗುವ ಪೊಲೀಸರ ಖಾಕಿ ವಸ್ತ್ರದಲ್ಲಿ
ದೇವಸ್ಥಾನದ ಕಲ್ಲುಕಂಬಗಳಲ್ಲಿ,
ಆರತಿ ಮಾಡುವಾಗ ನಿಶ್ಚಲನಾಗಿ ನಿಂತ ಅವನಲ್ಲಿ
ಗಾಂಧೀ ಚಳವಳಿಯ ನಾಯಕನಾಗಿ ಆಗ್ರಹಿಸುತ್ತಿದ್ದಾನೆ.

ನಿತ್ರಾಣನಾದವನ ಉಸಿರಿನಲ್ಲಿ
ಎರೆ ಹುಳದ ಧ್ಯಾನದಲ್ಲಿ
ಜೇನುಗಳ ಜೀವ ಕ್ರಿಯೆಗಳಲ್ಲಿ
ಬರಗಾಲದಲ್ಲೂ ಗಾಳಿಗರ್ಭದ ಹಸಿವ ನೀಗಿಸುವ
ಬಿದಿರಕ್ಕಿಯಲ್ಲಿ
ಮಣ್ಣಕನೆಯಲ್ಲಿ ಮಾಗಿದ ಹಿಡಿ ಉಪ್ಪಿನಲ್ಲಿ
ಗಾಂಧೀ ನಿತ್ಯವೂ ಮಾನವತೆಯ ಭಾಷೆಗೆ
ತರ್ಜುಮೆಗೊಳ್ಳುತ್ತಿದ್ದಾನೆ.

